1990ನೇ ಇಸವಿಯ ಕರ್ನಾಟಕ ಧನ ವಿನಿಯೋಗ ನಂ.2)

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎಂ.ವಿ. ರಾಜಶೇಖರ ಮೂರ್ತಿ (ಹಣಕಾಸು ಹಾಗೂ ಆಬಕಾರಿ ಮಂತ್ರಿಗಳು):- ಮಾನ್ಯ ಅಧ್ಯಕ್ಷರೇ 1990ನೇ ಇಸವಿಯ ಕರ್ನಾಟಕ ಧನ ವಿನಿಯೋಗ (ನಂ.2) ವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು:- ಪ್ರಸ್ತಾವ ಏನೆಂದರೆ "1990ನೇ ಇಸವಿಯ ಕರ್ನಾಟಕ ಧನ ವಿನಿಯೋಗ (ನಂ.2)ವನ್ನು ಮಂಡಿಸಲು ಅನುಮತಿ ನೀಡುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಎಂ.ವಿ. ರಾಜಶೇಖರ ಮೂರ್ತಿ (ಹಣಕಾಸು ಹಾಗೂ ಆಬಕಾರಿ ಮಂತ್ರಿಗಳು):- ಮಾನ್ಯ ಅಧ್ಯಕ್ಷರೇ 1990ನೇ ಇಸವಿಯ ಕರ್ನಾಟಕ ಧನ ವಿನಿಯೋಗ (ನಂ.2)ವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು :- ವಿಧೇಯಕವನ್ನು ಮಂಡಿಸಲಾಗಿದೆ.*

1990 ನೇ ಇಸವಿಯ ಕರ್ನಾಟಕ ಧನ ವಿನಿಯೋಗ (ನಂ.೨) ರ ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ.ವಿ. ರಾಜಶೇಖರ ಮೂರ್ತಿ (ಮಾನ್ಯ ಹಣಕಾಸು ಹಾಗೂ ಆಬಕಾರಿ ಮಂತ್ರಿಗಳು):- ಮಾನ್ಯ ಅಧ್ಯಕ್ಷರೇ 1990ನೇ ಇಸವಿಯ ಧನ ವಿನಿಯೋಗ ನಂ.2)ವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಸಿ. ಬೈರೇಗೌಡ:- ಮಾನ್ಯ ಅಧ್ಯಕ್ಷರೇ ನನಗೆ ಇದರ ಮೇಲೆ ಹೇಳುವುದಕ್ಕೆ ಅವಕಾಶ ಕೊಡಿ.

ಶ್ರೀ ಕಾಗೋಡು ತಿಮ್ಮಪ್ಪ:- ಮಾನ್ಯ ಅಧ್ಯಕ್ಷರೇ ಇವರೇ ಯಾವಾಗಲೂ ಹೆಚ್ಚು ಮಾತನಾಡಬೇಕಾ?

(ಗೊಂದಲ)

ಶ್ರೀ ಸಿ. ಬೈರೇಗೌಡ:- ಮಾನ್ಯ ಅಧ್ಯಕ್ಷರೆ ಮಾನ್ಯ ಹಣಕಾಸು ಮಂತ್ರಿಗಳು,

ಶ್ರೀ ಪಿ.ಜಿ.ಆರ್. ಸಿಂಧ್ಯ:- ಅಧ್ಯಕ್ಷರೆ ನಾವು ಬೆಳಿಗ್ಗೆ ಒಂಭತ್ತೂವರೆ ಗಂಟೆಯಿಂದ ಕುಳಿತುಕೊಂಡಿದ್ದೇವೆ. ಈಗ ಎಂಟು ಗಂಟೆ ಮೇಲೆ ಆಗಿದೆ.

ಅಧ್ಯಕ್ಷರು:- ಸಭೆ ಸಾಮಾನ್ಯವಾಗಿ ಈ ಆಪ್ರೊಪ್ರಿಯೇಷನ್ ಬಿಲ್ ಅನ್ನು....

ಶ್ರೀ ವಾಟಾಳ್ ನಾಗರಾಜ್:- ಅಧ್ಯಕ್ಷರೆ ವಿರೋಧಪಕ್ಷದ ನಾಯಕರು ನಮ್ಮೆಲ್ಲರಿಗೋಸ್ಕರ ಕಾಯುತ್ತಿದ್ದಾರೆ.

ಅಧ್ಯಕ್ಷರು :- ಎಲ್ಲರೂ ಒಟ್ಟಿಗೆ ಹೋಗೋಣ.

† ಶ್ರೀ ಸಿ. ಬೈರೇಗೌಡ (ವೇಮಗಲ್):- ಮಾನ್ಯ ಅಧ್ಯಕ್ಷರೆ ಧನವಿನಿಯೋಗದ ಈ ಮಸೂದೆಯನ್ನು ವಿರೋಧ ಮಾಡುತ್ತಾ ಸರ್ಕಾರದ ಗಮನಕ್ಕೆ ಒಂದು ಬಹಳ ಗುರುತರವಾಧಂಥ ವಿಚಾರವನ್ನು ತರಲಿಕ್ಕೆ ಇಷ್ಟಪಡತ್ತೇನೆ. ನಾನು ಈ ಆಬ್ಕಾರಿ ಇಲಾಖೆಯ ಮೇಲೆ ಮಾತನಾಡುವಾಗ ಹೇಳಿದ್ದೇನೆ. ಮುಖ್ಯಮಂತ್ರಿಗಳ ಬೇಡಿಕೆಗಳ ಮೇಲೆ ಮಾತನಾಡುವಾಗಲೂ ಕೂಡ ಹೇಳಿದ್ದೇನೆ. ಆದರೆ ಸರ್ಕಾರ ಏನೂ ಕ್ರಮ ತೆಗೆದುಕೊಳ್ಳಲಿಲ್ಲ. ಆದ್ದರಿಂದ ಈಗಲೂ ಪುನಃ ಅದೇ ಮಾತನ್ನು

*** Annexure.